ಇನ್ಸ್‌ಪೆಕ್ಟರ್ ಧನಂಜಯ ಠಾಣೆಗೆ ವರ್ಗಾವಣೆಯಾಗಿ ಬಂದ ದಿನದಿಂದ ಊರಲ್ಲಿ ಮಟ್ಕಾ ಗುಟ್ಕಾ ಜೂಜು ಚರ್ಮ ದಂಧೆ ಕುಡುಕರ ಹಾವಳಿ ಪ್ರಮಾಣ ಇಳಿಮುಖವಾಗಿದೆ. ಬಂದ ಆರೇ ತಿಂಗಳಲ್ಲಿ ಪ್ರಾಮಾಣಿಕನೆಂಬ ಸರ್ಟಿಫಿಕೇಟ್ ಅನ್ನು ಜನರಿಂದ ಗಿಟ್ಟಿಸಿ ಬಿಟ್ಟಿದ್ದಾನೆ. ಯಾವುದೇ ಜಾತಿ ಧರ್ಮದವರ ಉತ್ಸವ ಮೆರವಣಿಗೆಗಳಲ್ಲೂ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿ ಜೊತೆಗೆ ಹದ್ದಿನ ಕಣ್ಣಿಡುತ್ತಾನೆ. ಸಿಸಿ ಟಿವಿ ಕ್ಯಾಮೆರಾಗಿಂತಲೂ ಇವನ ಕಣ್ಣುಗಳು ಚುರುಕು. ತಪ್ಪಿತಸ್ಥರನ್ನು ಮುಲಾಜಿಲ್ಲದೆ ಬಂಧಿಸಿ ಥರ್ಡ್ ಡಿಗ್ರಿ ಟ್ರೀಟ್ಮೆಂಟ್ ಕೊಡೋದ್ರಲ್ಲಿ ಭಯಂಕರ ಕಟುಕ. ಸಮಯ ಸಿಕ್ಕರಾತು ಮಾರಾಯರೆ ಎನ್ಕೌಂಟರ್ ಮಾಡಿ ಬಿಸಾಡುವುದರಲ್ಲೂ ನರರಾಕ್ಷಸ.

ಇನ್ಸ್‌ಪೆಕ್ಟರ್ ಡ್ಯೂಟಿಗೆ ಇಂವಾ ಲಾಯಕ್ಕುಂಟು ಬಿಡಿ. ರಾಜಕಾರಣಿಗಳಿಗೂ ಡೋಂಟ್ ಕೇರ್ ಮಾಸ್ಟರ್ ಎಂಬ ರೆಕಾರ್ಡ್ ಇವನ ಸರ್ವೀಸಲ್ಲುಂಟು. ಒಂದೂರಲ್ಲಿ ಒಂದೂವರೆ ವರ್ಷವಿದ್ದರದೇ ಭಾಗ್ಯ ಅಂತೆಲ್ಲಾ ಕಂಡಾಬಟ್ಟೆ ಜನಸಾಮಾನ್ಯರು ಆಡಿಕೊಳ್ಳೋದುಂಟು. ಮೋರ್ ಓವರ್ ಈತನಿಗೆ ಜೈಹಿಂದೂ ಸೇನೆಯವರ ಮೇಲೇಕೋ ವಿಶ್ವಾಸವಿದ್ದಂತಿಲ್ಲ. ಬಾರ್ ನಲ್ಲಿ ಕುಡಿದು ಅರ್ಧರಾತ್ರಿ ಅರೆಬರೆ ಬಟ್ಟೆ ತೊಟ್ಟು ನರ್ತಿಸುವ ಪಡ್ಡೆ ಹುಡುಗ ಹುಡುಗಿಯರನ್ನು ನಮ್ಮ ತಂಡ ಬಡಿದು ಇವನಿಗೊಪ್ಪಿಸಿದರೆ ಇಂವಾ ನಮ್ಮನ್ನೇ ಒಳಹಾಕಿ ಥಳಿಸಿದ್ದುಂಟು. 'ನಿಮಗ್ಯಾರು ಪರ್ಮಿಶನ್ ಕೊಟ್ಟೋರು? ಅಂಥದ್ದೇನಿದ್ದರೂ ನಮ್ಮ ಗಮನಕ್ಕೆ ತನ್ನಿ' ಎಂದೂ ಗದರಿದ್ದ. ಲೈಸೆನ್ಸ್ ಇಲ್ಲದ ಬಾರ್‌ನಲ್ಲಿ ಅವಧಿ ಮೀರಿ ಕುಣಿದರೆ ತಪ್ಪು ಕಣ್ರಿ. ಮೊದಲು ಕಾನೂನು ಸರಿಯಾಗಿ ತಿಳ್ಕೊಳ್ಳಿ ಎಂದೆಲ್ಲಾ ಉಪದೇಶ ಬೇರೆ. ಹಿಂದೂ ಸಂಸ್ಕೃತಿ ಸಂಪ್ರದಾಯಗಳ ಕುರಿತು ಮಾತನಾಡಿದರೆ ಕೇಳುವ ತಾಳ್ಮೆಯೇ ಇಲ್ಲದ ಆಸಾಮಿ. ಯಾತರ ಹಿಂದೂ ಸಂಸ್ಕೃತಿರೀ? ಜಾತಿ ತಾರತಮ್ಯ ಮಾಡೋ ಜೀವ ವಿರೋಧಿ ಸಂಸ್ಕೃತಿ ಎಂಬ ಉಡಾಫೆಯ ದೌಲತ್ತು ಮಾತಲ್ಲಿ. ಮಹಾ ಗಾಂಚಲಿ ನನ್ಮಗನಿಗೆ ಹೊಯ್ ಇಂವಾ.

ಒಮ್ಮೆ ಬೀಚ್‌ನಲ್ಲಿ ಸಿಕ್ಕಿಬಿದ್ದ ಹಿಂದೂ ಹುಡುಗಿ ಮುಸ್ಲಿಂ ಹುಡುಗನ್ನ ಹಿಡಿದು ಜಡಿದು ಸಮಾ ಮಾಡಿ ಠಾಣೆಗೆ ತಂದೊಪ್ಪಿಸಿದರೆ ನಮ್ಮನ್ನೇ ಸೆಲ್‌ಗೆ ದೂಡಿ ಅವರನ್ನು ಕೂರಿಸಿಕೊಂಡು ವಿಚಾರಣೆ ನಡೆಸಿದ್ದಲ್ಲದೆ, ಹುಡುಗ ಹುಡುಗಿ ಮನೆಯವರನ್ನು ಕರೆಸಿ ತಿಳಿ ಹೇಳಿ ಮದುವೆ ಮಾಡಿಸಲು ಪುರೋಹಿತ್ಯೆ ವಹಿಸಿದಂಥ ಭಯಂಕರ ಬದ್ಮಾಷ್. ಸಾಬರ ವಿಚಾರದಲ್ಲಿ ಇಂವಾ ಒಂದಿಷ್ಟು ಸಾಫ್ಟ್ ಕಾರ್ನರ್. ಕಷ್ಟಪಟ್ಟು ಇಂತಹ ಕೇಸ್‌ಗಳನ್ನು ಫಾಲೋ ಮಾಡಿ ಹಿಡಿದು ಒಪ್ಪಿಸಿದರೆ ನಮ್ಮ ಮೇಲೇ ಅಟ್ರಾಸಿಟಿ ಕೇಸ್ ಜಡೀತೀನಿ ಹುಷಾರ್ ಅಂತ ಮೈಮೇಲೆ ಪಂಜುರ್ಲಿ ಬಂದಂಗಾಡ್ತಾನೆ.



ಯಜಮಾನರ ಫೋನ್ ಬರೋದ್ರೊಳ್ಗೆ ನಮ್ಮಗಳ ಮಕಮೂತಿ ಪಂಕ್ಚರ್ ಮಾಡಿ ಬಿಡುವ ಎಸ್.ಐ. ಧನಂಜಯ, ಫೋನ್‌ನಲ್ಲಿ ಮಾತ್ರ, 'ಅರೆ ನಿಮ್ಮವರ ಸಾರ್ ಗೊತ್ತಾಗಲಿಲ್ಲ ಸಾರಿ. ಈಗಲೇ ರಿಲೀಸ್ ಮಾಡೋಣ ಬಿಡಿ. ಕಾನೂನು ಸುವ್ಯವಸ್ಥೆಗೆ ನಾವಿದ್ದೀವಲ್ಲ ಸಾರ್. ಊರ ಉಸಾಬರಿ ಇವರಿಗೇಕೆ? ಬೈದು ಬುದ್ಧಿ ಹೇಳ್ಬೇಕು ಸಾರ್ ನಿಮ್ಮ ಹುಡುಗರಿಗೆ ಅಂಗೆಲ್ಲಾ ಗೌರವ ಸೂಸುತ್ತಾನೆ. ನಮಗೂ ಬ್ರೇನ್‌ವಾಶ್ ಮಾಡಲು ಟ್ರೈ ಮಾಡುತ್ತಾನೆ. ನೋಡಿ, ಒಬಿಸಿ ಹುಡುಗ್ರು ನೀವು. ದಾದಾಗಿರಿ ಬಿಟ್ಟುಬಿಡ್ರಯ್ಯ. ನಾವು ಹಚ್ಕೊಂಡು ತೋಳು ಏರಿಸ್ಕೊಂಡು ಮೆರವಣಿಗೇಲಿ ಹೊಡೆದಾಡಿ ನಾನಾ ನಮೂನಿ ಕೇಸ್ ಹುಟ್ಟಿಸಿ ಕೊಂಡು ಕೋರ್ಟ್ ಸ್ಟೇಶನ್ನು ಅಂತ ಅಲೆಯೋರು ನೀವು. ಅಧಿಕಾರಕ್ಕೆ ಏರೋರು ಅವರು. ನಿಮ್ಮ ಲೀಡರ್ಸ್ ಎಂದಾದ್ರೂ ಬೀದಿಗಿಳಿದು ಬಡಿದಾಡಿದಾರಾ? ಅಟ್ಲೀಸ್ಟ್ ಲಟ್ಟಾ ಟೇಸ್ಟ್ ತಿಂದಿದಾರಾ? ಹೇಳಿ, ಸುಮ್ನೆಯ ಯಾಕ್ರಯ್ಯ ದೇವರು ಧರ್ಮ ಅಂತ ಬಡಿದಾಡಿ ವೇಸ್ಟ್‌ಬಾಡಿಗಳಾಗ್ತಿರಾ. ದುಡ್ಕೊಂಡು ತಿನ್ನೋದು ಕಲೀರಿ. ಅಪ್ಪ ಅಮ್ಮನ್ನ ನೆಟ್ಟಗೆ ನೋಡ್ಕೊಳ್ಳಿ. ಅವರೇ ದೇವರು ಎಂಬ ಆಶೀರ್ವಚನದ ಎಕ್ಸ್ಟ್ರಾ ಬೋನಸ್. ಇವನು ಇಲ್ಲಿಂದ ಎತ್ತಂಗಡಿ ಆಗೋವರೆಗೂ ನಮ್ಮ ಆಟ ಸಾಗಲಿಕ್ಕಿಲ್ಲವೆಂಬ ಸತ್ಯ ಗರ್ಭೀಕರಿಸಿ ಭಯ ಹತ್ತಿದೆ. ಕರೆದರೆ ಇಂವಾ ಸಾರ್ವಜನಿಕ ಸಮಾರಂಭಗಳಿಗೂ ಬಂದಿಳಿದು ದೇವರು ಧರ್ಮ ಅಭಿವ್ಯಕ್ತಿ ಸ್ವಾತಂತ್ರ್ಯ ಅಸಹಿಷ್ಣುತೆ ಕುರಿತಂತೆ ಥೇಟ್ ಬುದ್ಧಿ ಜೀವಿಗಳ ಶೈಲಿ ಭಾಷಣ ಬಿಗಿದು ಊರು ತುಂಬಾ ಫೇಮಸ್ಸೂ ಆಗಿರೋ ದುಂಟು. ಹೊಟ್ಟೆ ಉರಿತದಪ್ಪ. ಇವನು ಬಂದ ಮೇಲೆಯೇ ಲವ್ಜಿಹಾದ್ ಕೇಸ್ ಹೆಚ್ಚಾಗಿವೆ ಕಣ್ರಯ್ಯಾ. ಇವಕ್ಕೆಲ್ಲಾ ಬ್ರೇಕ್ ಹಾಕದಿದ್ಮೇಲೆ ಸಂಘ ಯಾಕೆ? ಅಂತ ಯಜಮಾನರೂ ನಮ್ಮ ಮೇಲೇ ಗುರಾಯಿಸ್ತಾರೆ. ಯಜಮಾನರ ಪಿರಿಪಿರಿ ತಾಳಲಾಗದೆ ಮಂಡೆ ಬಿಸಿ ಮಾಡಿಕೊಂಡಿರುವ ಶಾಮ, ತಂಡದ ಗೆಳೆಯರೊಡನೆ ಈ ರಗಳೆ ಚರ್ಚೆ ಮಾಡದ ದಿನವಿಲ್ಲ. ಬುದ್ಧಿಜೀವಿ ಎಸ್.ಐಗೆ ಸರಿಯಾಗಿ ಲದ್ದಿ ತಿನ್ನಿಸಿ ಇಲ್ಲಿಂದ ಎತ್ತಂಗಡಿ ಮಾಡಿಸಲೇಬೇಕೆಂಬ ಠರಾವು ಪ್ರಾಯಶಃ ನೂರಾ ಹನ್ನೊಂದನೇ ಬಾರಿಗೆ ಮಂಡನೆಯಾಯ್ತುದೆ.

* * *

ನಸುಕಿಗೇ ಊರಾಚೆಗಿರುವ ರೈಲ್ವೇ ಹಳಿಯ ಮೇಲೆ ಕತ್ತರಿಸಿ ಚೆಲ್ಲಾಪಿಲ್ಲಿಗೊಂಡ ಮನುಷ್ಯನ ಅಂಗಾಂಗಗಳು ಬಿದ್ದಿವೆ. ಯಾರೋ ಸ್ಟೂಡೆಂಟೋ ಟೂರಿಸ್ಟೋ ಬ್ಯಾಗ್ನಿಂದ ಬುಜ್ಸ್‌ಗಳೂ ಚೆಲ್ಲಾಡಿವೆ. ವಾಕ್ ಮಾಡುವ ಮಂದಿ ನೋಡಿ ನರ್ವಸ್ ಆಗಿ ಹಬ್ಬಿಸಿದ ಪುಕಾರು ನಿಧಾನವಾಗಿ ಊರು ತುಂಬಾ ವ್ಯಾಪಿಸಿದೆ. ರೇಲ್ವೆನವರು ಪೊಲೀಸು ಪ್ರೆಸ್‌ನವರು ವಾಹನಗಳಲ್ಲಿ ಸರದಿ ಪ್ರಕಾರವಾಗಿ ಬಂದಿಳಿದರು. ಹಿಂದೂ ಸೇನೆಯವರಿಗೂ ಸುದ್ದಿ ಮುಟ್ಟಿದ ಮೇಲೆ ಸಹಜ ಕುತೂಹಲಭರಿತರಾಗಿ ತಮ್ಮ ಲೀಡರ್ ಶಾಮನ ಜೊತೆ ಬೈಕ್‌ಗಳಲ್ಲಿ ಕೆಟ್ಟ ಸೌಂಡು ಮಾಡುತ್ತಾ ತಾವು ಬಂದೆವೆಂದು ಸಾರುತ್ತಾರೆ. ಡೆಡ್‌ಬಾಡಿ ನೋಡಿ ರೋಮಾಂಚಿತರಾಗಿ ಬಾಯಿ ಮೇಲೆ ಬೆರಳಿಟ್ಟು ಕೊಳ್ಳುವುದೊಂದೇ ಬಾಕಿ. ಅವನೇ ಇವನಾ? ಬೇರೆ ಮಾಣಿಯಾ ಎಂಬ ಶಂಕೆಗೆ ಜಿಜ್ಞಾಸೆಗೆ ಬಿದ್ದ ಅವರ ತಲೆ ಫುಲ್ ಬ್ಲ್ಯಾಂಕು. ಎಸ್.ಐ. ಹೆಚ್ಚೇ ಹಾರಾಡುತ್ತಾ ಮಹಜರ್‌ಗೆ ಶುರು ಹಚ್ಚಿಕೊಂಡ.

* * *

ಧೂಳೆಬ್ಬಿಸುತ್ತಾ ಹಾರಿ ಹೋದ ಬೈಕ್ ಒಂದು ಶಾಮನ ತಂಡದವರ ಕಣ್ಣು ಕುಕ್ಕಿತು. ಹೋಯ್ ಆ ಬೈಕ್ ಯಾವಂದು ಗೊತ್ತುಂಟಾ? ಹೈದರಬಾದ್ನಾಗಿರೋ ಟೈಲ್ಸ್ ಕಂಪನಿ ಓನರ್ ಇಬ್ರಾಹಿಂನ ತಮ್ಮಂದು. ಭಾಳ ಮೆರಿತಿದಾನೆ ನನ್ಮಗ. ಅದು ಹೋಗ್ಲಿ ಆ ಹುಡುಗಿ ಯಾರು ಗೊತ್ತುಂಟಾ? ಶಿಷ್ಯರನ್ನು ಕೇಳುತ್ತಾ ಶಾಮ ನಿಟ್ಟುಸಿರುಬಿಟ್ಟ. ಗೊತ್ತುಬಿಡು ಗುರು ನಮ್ಮ ಕ್ಲಾಸ್ಮೇಟೋಳು ವೀಣಾ ಅಂತ. ಎಲ್ಲಾ ನಮ್ಮ ಕರ್ಮ...... ನಮ್ಮ ಹುಡ್ಗೀರ್‌ಗೆ ಸಾಬರ ಹುಡುಗರೇ ಬೇಕಾ? ನಾವೇನು ಗಂಡಸರಲ್ವಾ?